# ಕರ್ನಾಟಕ ಮುನ್ಸಿಪಲ್ ಅಧಿಕಾರಿ ಹಾಗೂ ನೌಕರರ ಸಂಘ (ನೋ) ಬೆಂಗಳೂರು

**178, 4ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18.**


ಕ್ರಮ ಸಂಖ್ಯೆ:4/2015 ದಿನಾಂಕ:07.10.2015

ಪ್ರಿಯ ಸಹೋದ್ಯೋಗಿ ಮಿತ್ರರರೆ,

ಸಮಗ್ರ ಆಡಳಿತದಲ್ಲಿ ನಗರಾಡಳಿತವು ವಿಶೇಷತೆಯನ್ನು ಹೊಂದಿರುತ್ತದೆ. ಇಲ್ಲಿಯವರೆಗೆ ನಗರಾಡಳಿತ ವಿವಿಧ ವೃಂದದ ನೌಕರರು ತಮ್ಮ ಹಿತ ರಕ್ಷಣೆಗಾಗಿ ಪ್ರಯತ್ನಿಸಿ ಅನೇಕ ಸಲ ವಿಫಲರಾಗಿರುವುದು ತಮಗೆ ತಿಳಿದ ವಿಷಯವಾಗಿದೆ. ಈ ತಪ್ಪನ್ನು ಸರಿ ಪಡಿಸಲು ನಗರಾಡಳಿತದ ಎಲ್ಲಾ ವೃಂದಗಳ ಸಮಗ್ರ ಹಿತಾಸಕ್ತಿ ಮತ್ತು ಸಾರ್ವಜನಿಕರ ಹಿತಾಸಕ್ತಿಯನ್ನು ಸಹ ರಕ್ಷಿಸಲು ರಾಜ್ಯ ಮಟ್ಟದ ಈ ಸಂಘವನ್ನು ಸಂಘಟಿಸಲಾಗಿದೆ.

ಈ ಸಂಘದ ಪ್ರಥಮ ಮಹಾಸಭೆಯನ್ನು ದಿನಾಂಕ:18.10.2015 ರಂದು ದಾವಣಗೆರೆಯ ಎಂ.ಬಿ.ಎ ಕಾಲೇಜಿನ ಸಭಾಂಗಣದಲ್ಲಿ ನೆರವೇರಿಸಲು ನಿರ್ಧರಿಸಲಾಗಿದೆ. ಅಂದು ನಿರ್ಣಯ ಕೈಗೊಳ್ಳಬಹುದಾದ ವಿಷಯ ಪಟ್ಟಿ (ಅಜೆಂಡಾ) ಇದರೊಂದಿಗೆ ಲಗತ್ತಿಸಲಾಗಿದೆ. ವಿಷಯ ಪಟ್ಟಿ ಬಹುದೀರ್ಘವಾಗಿರುವುದರಿಂದ ಅದನ್ನು ಸವಿವರವಾಗಿ ಒಂದೇ ದಿನದಲ್ಲಿ ಚರ್ಚಿಸ್ಲು ಸಾಧ್ಯವಾಗಲಾರದು. ಕಾರಣ ಸದರಿ ವಿಷಯಗಳನ್ನು ತಾವು ಅಧ್ಯಯನ ಮಾಡಿ ಅಂದಿನ ದಿನ ಆ ವಿಷಯವನ್ನು ಒಪ್ಪಬಹುದೋ ಅಥವಾ ಇಲ್ಲವೋ ಎಂಬುದನ್ನು ಮಾತ್ರ ಸಭೆಯಲ್ಲಿ ವ್ಯಕ್ತ ಪಡಿಸಲು ಕೋರಲಾಗಿದೆ. ಸಭೆ ಬಹುಮತದಿಂದ ಪಾಸು ಮಾಡುವ ವಿಷಯಗಳನ್ನು ಸರ್ಕಾರದ ಮುಂದೆ ಮಂಡಿಸಲಾಗುವುದು ಬಹುಮತ ವಿಲ್ಲದ ವಿಷಯುಗಳನ್ನು ಮುಂದೂಡಲಾಗುವುದು.

ಸಂಘವು ತನ್ನದೇ ಆದ ವೆಬ್ ಸೈಟ್ ಹೊಂದಿದ್ದು (www.kmoea.in/home). ವೆಬ್ ಸೈಟ್ ಮೂಲಕ ನೇರವಾಗಿ ಸಲಹೆ ಸೂಚನೆ ನೀಡಲು, ವಿಷಯ ಪಟ್ಟಿಯಲ್ಲಿ ಹೊಸ ವಿಷಯ ಸೇರ್ಪಡೆ ಮಾಡುವ ಸಲುವಾಗಿ ಸಂಪರ್ಕಿಸಲು ಕೋರಲಾಗಿದೆ.

ದಿನಾಂಕ:18.10.2015 ರಂದು ಮುನ್ಸಿಪಲ್ ಎಲ್ಲಾ ವೃಂದದ ನೌಕರರು ಅಧಿಕಾರಿಗಳು ವಿಶೇಷವಾಗಿ ಯುವ ಅಧಿಕಾರಿ ನೌಕರರು ಭಾಗವಹಿಸಿ ಸಮಾರಂಭ ಯಶಸ್ವಿಗೊಳಿಸಲು ವಿನಂತಿಸಲಾಗಿದೆ.

ಅನಂತವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

S.R.Garwad

ಅಧ್ಯಕ್ಷರು

ಶಿ.ರಾ.ಗಾರವಾಡ